## ಡೋಲಿಗೆ ಚಿತ್ರ

ಒಂದು ಕಾರ್ಯಕ್ರಮದಲ್ಲಿ ತಿಮ್ಮ ಡೋಲಿನ ಎರಡು ಬದಿಗಳಿಗೂ ಹೆಣ್ಣಿನ ಚಿತ್ರಗಳನ್ನು ಅಂಟಿಸಿಕೊಂಡು ಡೋಲು ಬಾರಿಸುತ್ತಿದ್ದ. ಇದನ್ನು ನೋಡಿದ ಒಬ್ಬರು 'ಡೋಲಿಗೆ ಮಹಿಳೆಯರ ಚಿತ್ರ ಹಾಕಿದ್ದೀರಲ್ಲ, ನೀವೇನು ಸೌಂದರ್ಯೋಪಾಸಕರೇ?' ಎಂದು ಕೇಳಿದರು.
ಅವರ ಮಾತಿಗೆ ತಿಮ್ಮ, 'ಹಾಗೇನಿಲ್ಲ, ಒಂದು ಚಿತ್ರ ನನ್ನ ಅತ್ತೆಯದು, ಇನ್ನೊಂದು ನನ್ನ ಹೆಂಡತಿಯದು' ಎಂದು ಹೇಳಿ ಡೋಲನ್ನು ಮೊದಲಿಗಿಂತಲೂ ಜೋರಾಗಿ ಬಡಿಯತೊಡಗಿದ!

**ಶಂಕರೇಗೌಡ ತುಂಬಕೆರೆ**



## ನೀವ್ಯಾಕೆ ಬಿಚ್ತೀರಾ?

ಹೋಮ್‌ವರ್ಕ್ ಮಾಡದೆ ಇದ್ದ ಗುಂಡನನ್ನುದ್ದೇಶಿಸಿ ಮೇಷ್ಟ್ರು ಹೇಳಿದರು– 'ಯಾವಾಗ ನೋಡಿದ್ರೂ ಹೋಮ್‌ವರ್ಕ್ ಮಾಡದೇನೇ ಬರ್ತೀಯಲ್ಲ... ಹೀಗೇ ಮಾಡಿದ್ರೆ ಚಡ್ಡಿ ಬಿಚ್ತೀನಿ ನೋಡು.' ಅದಕ್ಕೆ ಗುಂಡ, 'ಅಯ್ಯೊ ಬೇಡ ಸರ್, ನಾನು ಹೋಮ್‌ವರ್ಕ್ ಮಾಡಲಿಲ್ಲ ಅಂತ ಪಾಪ ನೀವ್ಯಾಕೆ ಚಡ್ಡಿ ಬಿಚ್ತೀರಾ...' ಎಂದಾಗ ಕ್ಲಾಸಿನಲ್ಲಿದ್ದವರಿಗೆಲ್ಲಾ ನಗುವೋ ನಗು.

**ಪಿ. ಜಯವಂತ ಪೈ**



ಚಿತ್ರಗಳು: ಗಣೇಶ ಆಚಾರ್ಯ